ಅವರ ಪಾಲಿನ ವಂತಿಗೆ ಹಣ ಪಾವತಿಸಿದ ರಶೀದಿ ತೋರಿಸಿ ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ಪಡೆಯಬಹುದು.

ಗೃಹ ನಿರ್ಮಾಣ ಸಹಕಾರ ಸಂಘಗಳ ಲೆಕ್ಕಪರಿಶೋಧನೆ

5 (32) ಶ್ರೀ ಬಸವರಾಜನ್ ಎಸ್.ಕೆ. (ಚಿತ್ರದುರ್ಗ) ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಪ್ರತಿ ವರ್ಷ ಲೆಕ್ಕಪರಿಶೋಧನೆಯ ಕಾರ್ಯಕ್ರಮವನ್ನು ರೂಪಿಸಿ, ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಮಾಡಿಸುವ ನಿಯಮವಿದ್ದು, ಅದರಂತೆ ಗೃಹ ನಿರ್ಮಾಣ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಸಹ ಮಾಡಿಸುತ್ತಿದ್ದು, ಈ ಲೆಕ್ಕಪರಿಶೋಧನೆ ಹಂಚಿಕೆ ಆದೇಶವನ್ನು ನಿರ್ದೇಶಕರ ಕಛೇರಿಯಿಂದ ನೀಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ, 2008–09, 2009–10 ಹಾಗೂ 2010–11ನೇ ಸಾಲುಗಳಲ್ಲಿ ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರನ್ನು ನೇಮಿಸಿದ್ದು, ಇಲಾಖೆಯ ಯಾವ ನಿಯಮದನ್ವಯ ಈ ಪ್ರಕ್ರಿಯೆ ನಡೆದಿದೆ ;

ಇ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿಯಿಂದ ಗೃಹ ನಿರ್ಮಾಣ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗಾಗಿ ಮಾಡಿದ ಸಂಘಗಳ ಹಂಚಿಕೆಯ ಆದೇಶಗಳ ಮಾರ್ಪಾಟು ಎಷ್ಟು ಪ್ರಕರಣಗಳಾಗಿವೆ ; ಕಾರಣಗಳೇನು ; (ಪೂರ್ಣ ವಿವರಗಳನ್ನು ನೀಡುವುದು)

ಈ) ಸದರಿ ಜಿಲ್ಲೆಗಳ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ಪೂರ್ಣಗೊಂಡಿರುವ ಸಂಘಗಳ

ಸಂಖ್ಯೆ; ಈ ಪೈಕಿ ವರದಿಗಳು ಬಿಡುಗಡೆಯಾಗಿರುವ ಸಂಖ್ಯೆ ಹಾಗೂ ಬಿಡುಗಡೆಗೆ ಬಾಕಿ ಇರುವ ಸಂಘಗಳ ಸಂಖ್ಯೆ ಎಷ್ಟು ; (ಕಳೆದ ಮೂರು ವರ್ಷಗಳ ವರ್ಷಾವಾರು ವಿವರ ಒದಗಿಸುವುದು)

ಊ) ಲೆಕ್ಕಪರಿಶೋಧನೆ ಪೂರ್ಣಗೊಂಡಿದ್ದರೂ ವರದಿಗಳು ಬಿಡುಗಡೆಯಾಗದಿರುವ ಸಂಘಗಳು ಯಾವುವು ; ಎಷ್ಟು ವರ್ಷಗಳಿಂದ ಬಾಕಿ ಇದೆ ; ಇದಕ್ಕೆ ಕಾರಣಗಳೇನು ; (ಪೂರ್ಣ ವಿವರ ಒದಗಿಸುವುದು) ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ಹೌದು.

ಆ) ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 63(1)ರನ್ವಯ ಪ್ರತಿ ಸಹಕಾರ ಸಂಘದ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ನಿರ್ವಹಿಸುವುದು ಈ ಇಲಾಖೆಯ ಪ್ರಮುಖ ಕಾರ್ಯವಾಗಿರುತ್ತದೆ. ಅದರಂತೆ ಈ ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಗೃಹ ನಿರ್ಮಾಣ ಸಹಕಾರ ಸಂಘಗಳ ಹಂಚಿಕೆಯಲ್ಲಿ 3 ವರ್ಷಗಳಲ್ಲಿ ಆದೇಶಗಳ ಮಾರ್ಪಾಟು ವಿವರ:

1. 2008–09 – 93
2. 2009–10 – 25
3. 2010–11 – 1

ಆಡಳಿತಾತ್ಮಕ ಕಾರಣಗಳಿಗಾಗಿ ಈ ಬದಲಾವಣೆಗಳನ್ನು ಮಾಡಲಾಗಿದೆ.

ಈ) ಅ) ಲೆಕ್ಕಪರಿಶೋಧನೆ ಪೂರ್ಣಗೊಂಡಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ:

ಜಿಲ್ಲೆ / ವರ್ಷ	2008–09	2009–10	2010–11
ಬೆಂಗಳೂರು	152	163	30
ಮೈಸೂರು	87	109	24
ಒಟ್ಟು	**239**	**272**	**54**

ಆ) ವರದಿಗಳು ಬಿಡುಗಡೆಯಾಗಿರುವ ಸಂಘಗಳ ಸಂಖ್ಯೆ:

ಜಿಲ್ಲೆ / ವರ್ಷ	2008–09	2009–10	2010–11
ಬೆಂಗಳೂರು	152	163	19
ಮೈಸೂರು	87	108	23
ಒಟ್ಟು	**239**	**271**	**42**

ಇ) ಬಿಡುಗಡೆಗೆ ಬಾಕಿ ಇರುವ ವರದಿಗಳ ಸಂಖ್ಯೆ:

ಜಿಲ್ಲೆ / ವರ್ಷ	2008–09	2009–10	2010–11
ಬೆಂಗಳೂರು	–	–	11
ಮೈಸೂರು	–	1	01
ಒಟ್ಟು	–	**1**	**12**

ಉ) **2009–10ನೇ ಸಾಲು**

1. ಬಿ.ಎ.ಆರ್.ಸಿ. ಮತ್ತು ಆರ್.ಎಂ.ಪಿ. ಎಂಪ್ಲಾಯೀಸ್ ಗೃ.ನಿ.ಸ.ಸಂ.ನಿ., ಮೈಸೂರು – 2008–09

2010–11ನೇ ಸಾಲು

ಬೆಂಗಳೂರು ಜಿಲ್ಲೆ:

1. ಸಹ್ಯಾದ್ರಿ ಗೃ.ನಿ.ಸ.ಸಂ.ನಿ., ಬೆಂಗಳೂರು
2. ಅಮೃತ ಗೃ.ನಿ.ಸ.ಸಂ.ನಿ., ಬೆಂಗಳೂರು
3. ತಲಕಾವೇರಿ ಗೃ.ನಿ.ಸ.ಸಂ.ನಿ., ಬೆಂಗಳೂರು
4. ನ್ಯಾಷನಲ್ ಗೃ.ನಿ.ಸ.ಸಂ.ನಿ., ಬೆಂಗಳೂರು
5. ದಿ ಗೌರ್ನಮೆಂಟ್ ಪೋರ್ಸಲೀನ್ ಫ್ಯಾಕ್ಟರಿ ನೌಕರರ ಗೃ.ನಿ.ಸ.ಸಂ.ನಿ., ಬೆಂಗಳೂರು
6. ಸರ್ವೆ ಆಫ್ ಇಂಡಿಯಾ ಗೃ.ನಿ.ಸ.ಸಂ.ನಿ., ಬೆಂಗಳೂರು
7. ಪದ್ಮನಾಭನಗರ ಗೃ.ನಿ.ಸ.ಸಂ.ನಿ., ಬೆಂಗಳೂರು
8. ಸಿವಿಲ್ ಏವಿಯೇಷನ್ ಮತ್ತು ಮೆಟಿರಿಯಾಲಾಜಿಕಲ್ ನೌ.ಗೃ.ನಿ.ಸ.ಸಂ.ನಿ., ಬೆಂಗಳೂರು
9. ಎನ್.ಎ.ಎಲ್. ನೌಕರರ ಗೃ.ನಿ.ಸ.ಸಂ.ನಿ., ಬೆಂಗಳೂರು
10. ಡಿಫೆನ್ಸ್ ಕಾಲೋನಿ ಗೃ.ನಿ.ಸ.ಸಂ.ನಿ., ಬೆಂಗಳೂರು
11. ಬನಶಂಕರಿ ಗೃ.ನಿ.ಸ.ಸಂ.ನಿ., ಬೆಂಗಳೂರು

ಬೆಂಗಳೂರು ಜಿಲ್ಲೆಯಲ್ಲಿನ 11 ಗೃಹ ನಿರ್ಮಾಣ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇತ್ತೀಚೆಗೆ 2010–11ನೇ ಸಾಲಿನಲ್ಲಿ ಮುಕ್ತಾಯಗೊಂಡಿದ್ದು, ವರದಿಗಳು ಪರಿಶೀಲನಾ ಹಂತದಲ್ಲಿದ್ದು, ಬಿಡುಗಡೆಗೆ ತ್ವರಿತವಾಗಿ ಕ್ರಮವಿಡಲಾಗುತ್ತಿದೆ.

ಮೈಸೂರು ಜಿಲ್ಲೆ:

1. ಬಸವೇಶ್ವರ ಗೃ.ನಿ.ಸ.ಸಂ.ನಿ., ಮೈಸೂರು, ಮೈಸೂರು ಜಿಲ್ಲೆಯಲ್ಲಿನ ಬಿ.ಎ.ಆರ್.ಸಿ. ಮತ್ತು ಆರ್.ಎಂ.ಪಿ. ಎಂಪ್ಲಾಯೀಸ್ ಗೃಹ ನಿರ್ಮಾಣ ಸಹಕಾರ ಸಂಘದ ಲೆಕ್ಕಪರಿಶೋಧನೆಯು 2009–10ನೇ ಸಾಲಿನಲ್ಲಿ ಮುಕ್ತಾಯಗೊಂಡಿದ್ದು, ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರ ವಿಚಾರಣಾಂಶಗಳನ್ನು ವರದಿಯಲ್ಲಿ ಅಳವಡಿಸಲು ಬಾಕಿ ಇರುತ್ತದೆ. ಮುಂದುವರೆದಂತೆ ಬಸವೇಶ್ವರ ಗೃಹ ನಿರ್ಮಾಣ ಸಹಕಾರ ಸಂಘದ ಲೆಕ್ಕಪರಿಶೋಧನೆ ಇತ್ತೀಚೆಗೆ 2010–11ರ ಸಾಲಿನಲ್ಲಿ ಮುಕ್ತಾಯಗೊಂಡಿದ್ದು, ವರದಿ ಬಿಡುಗಡೆಗೆ ಕ್ರಮವಿಡಲಾಗಿದೆ.

ಡಾ: ನಂಜುಂಡಪ್ಪ ವರದಿ ಪ್ರಕಾರ ಲೋಕೋಪಯೋಗಿ ಇಲಾಖೆಗೆ 2010–11ನೇ ಸಾಲಿಗೆ ನೀಡಿರುವ ಹಣ

6 (14) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಡಾ: ನಂಜುಂಡಪ್ಪ ವರದಿ ಪ್ರಕಾರ ಲೋಕೋಪಯೋಗಿ ಇಲಾಖೆಗೆ 2010–11ನೇ ಸಾಲಿಗೆ ನಿಗದಿಪಡಿಸಲಾದ ಹಣವೆಷ್ಟು ; ಆ ಪೈಕಿ ಬಿಡುಗಡೆಯಾಗಿರುವ ಹಣವೆಷ್ಟು ; ಅದರಲ್ಲಿ ಖರ್ಚಾದ ಹಣವೆಷ್ಟು ; ಲೆಕ್ಕಶೀರ್ಷಿಕೆ ಪ್ರಕಾರ ಮಾಹಿತಿ ನೀಡುವುದು (Head of Account wise-allocation/ release / expenditure) ?